ನಷ್ಟವಾಗಬಹುದು. ಆದರೆ ಇದರಿಂದ ಉಳಿತಾಯ ಮತ್ತು ಪಾಪದ ಕೆಲಸದಿಂದ ಒಂದು ಪುಣ್ಯದ ಕೆಲಸಕ್ಕೆ ತಾವುಗಳು ಹೆಜ್ಜೆ ಇಟ್ಟ ಹಾಗೆ ಆಗುತ್ತದೆ. ಆದ್ದರಿಂದ ಪಾನನಿರೋಧವನ್ನು ಜಾರಿಗೆ ತರಕ್ಕಂಥ ಒಂದು ದಿಟ್ಟ ನಿಲುವನ್ನು ನಿಮ್ಮ ಸರಕಾರವು ಪ್ರದರ್ಶನ ಮಾಡಿ ಈ ದೇಶದಲ್ಲಿ ಒಂದು ಆದರ್ಶವನ್ನು ಪಾಲನೆ ಮಾಡಿದ್ದಾರೆ ಎಂದು ನೀವು ಅನ್ನಿಸಿಕೊಳ್ಳಬೇಕು. ಇದೇ ಸಂದರ್ಭದಲ್ಲಿ ಹಿಂದೆ ಪಾನನಿರೋಧವನ್ನು ಜಾರಿಗೆ ತರಲಿಲ್ಲ ಎಂದು ಹೇಳಿ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಅಂದಿನ ಮುಖ್ಯ ಮಂತ್ರಿಯವರಾಗಿದ್ದ ನಿಜಲಿಂಗಪ್ಪನವರಿಗೆ ನಿಮ್ಮ ಮಂತ್ರಿ ಮಂಡಲದಲ್ಲಿ ಇರುವುದಿಲ್ಲ ಎಂದು ಹೇಳಿ ಯಾರೇ ಒತ್ತಾಯ ಮಾಡಿದರೂ ಕೇಳದೆ ತಮ್ಮ ರಾಜೀನಾಮೆಯನ್ನು ಕೊಟ್ಟ ಉದಾಹರಣೆಯನ್ನು ನೆನಪಿಸಿಕೊಡುತ್ತಿದ್ದೇನೆ. ಈ ನಾಡನ್ನು ಕಟ್ಟಿದಂಥ ಒಬ್ಬ ಧೀರ ಮಹಿಳೆಯನ್ನು ನಾವಿಂದು ನೆನಪಿಸಿಕೊಳ್ಳಬೇಕು. ಆಪರಾಗಳು ಈ ನಾಡನ್ನು ಕಟ್ಟಿದಂಥ ಜನರು. ಅವರು ತೆಗೆದುಕೊಂಡ ಹಾಗೆ ನೀವೂ ಕೂಡ ದಿಟ್ಟ ನಿಲುವನ್ನು ತೆಗೆದುಕೊಂಡರೆ ಈ ಕರ್ನಾಟಕ ರಾಜ್ಯದ ಲಕ್ಷಾಂತರ ಮಹಿಳೆಯರ ತಾಳಿಯು ಉಳಿಯುತ್ತದೆ. ಲಕ್ಷಾಂತರ ಮಹಿಳೆಯರು ಕಣ್ಣೀರು ಸುರಿಸುವುದನ್ನು ತಪ್ಪಿಸಬಹುದು. ಲಕ್ಷಾಂತರ ಜನ ರೌಡಿಗಳ ಕಾಟವು ತಪ್ಪುತ್ತದೆ. ಲಕ್ಷಾಂತರ ಜನ ಪೋಸ ಹೋಗುವುದು ತಪ್ಪುತ್ತದೆ. ಭ್ರಷ್ಟಾಚಾರವೂ ತಪ್ಪುತ್ತದೆ. ಹೀಗೆ ಎಲ್ಲವೂ ನಿಲ್ಲಬೇಕಾದರೆ ಈ ಪಾನನಿರೋಧವನ್ನು ಜಾರಿಗೆ ತರತಕ್ಕಂಥ ಕ್ರಮವನ್ನು ತಾವುಗಳು ಕೈಗೊಳ್ಳಬೇಕೆಂದು ವಿನಮ್ರವಾಗಿ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ತಾಷು ಬರುವುದಕ್ಕಿಂತ ಮುಂಚೆ ನಾನು ಕೆಲವು ವಿಚಾರಗಳನ್ನು ಹೇಳಿದ್ದೆ. ಮತ್ತೊಮ್ಮೆ ಹೇಳಬಯಸುತ್ತೇನೆ, ಇದು ತಮ್ಮ ಗಮನಕ್ಕೆ ಬಂದಿರಬಹುದು. ಈ ಸದನವನ್ನು ಇನ್ನೂ ೫-೬ ದಿವಸ ಮುಂದುವರೆಸುವುದಾದರೆ ನಾಡಿದ್ದು ಕಾಗತು ಮಾತನಾಡಿ. ನಮ್ಮ ಸ್ನೇಹಿತರುಗಳನ್ನು ಕರೆಸಬೇಕು. ಪ್ರಜಾತಂತ್ರದಲ್ಲಿ ಒಬ್ಬರಿಗೊಬ್ಬರಿಗೆ ಗೌರವ ಇರುತ್ತದೆ. ಅವರೂ ಈ ಆಯವ್ಯಯದ ಚರ್ಚೆಯ ಸಂದರ್ಭದಲ್ಲಿ ಇಲ್ಲವೇ ಬೇರೆ ರೂಪದಲ್ಲಿಯಾದರೂ ಭಾಗವಹಿಸುವಂತಹ ಒಂದು ವ್ಯವಸ್ಥೆ ನಿರ್ಮಾಣ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಸರಕಾರ ವಿಫಲವಾದಾಗ, ಇವರು ಹೆಚಮಾರಿತನಕ್ಕೆ ಬಂದಾಗ ತಾವು ಒಂದೆರಡು ಹತ್ತು ಬಾರಿ ನಿಮ್ಮ ಕಾರ್ಯಾಲಯಕ್ಕೆ ಇಬ್ಬರನ್ನೂ ಕರೆದು ಅದನ್ನು ಸರಿಪಡಿಸತಕ್ಕಂತಹ ವ್ಯವಸ್ಥೆ ಮಾಡಬೆ ಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರ ಅನುಮತಿ ಕೋರಿ ಪ್ರಸ್ತಾಪಿಸಲಾದ ವಿಷಯ

ರಾಜ್ಯ ಜನತಾದಳ ಅಧ್ಯಕ್ಷರಾದ ಶ್ರೀ ಹೆಚ್. ಡಿ. ದೇವೇಗೌಡ ಎಂ. ಪಿ. ರವರು ಪತ್ರಿಕಾ ಗೋಷ್ಠಿಯಲ್ಲಿ ಸುಳ್ಳು ಹೇಳಿಕೆ ನೀಡಿರುವ ಬಗ್ಗೆ

† ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ). — ಮಾನ್ಯ ಅಧ್ಯಕ್ಷರೆ, ನನ್ನ ಮೇಲೆ ಜನತಾ ಪಾರ್ಟಿಯ ಅಧ್ಯಕ್ಷರು ಸುಳ್ಳು ಹೇಳಿಕೆ ಕೊಟ್ಟಿದ್ದಾರೆ. ಅದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಡವೇ ? ನಿನ್ನೆ ಮೊನ್ನೆ ರಾಜ್ಯದ ಜನತಾ ಪಕ್ಷದ ಅಧ್ಯಕ್ಷರಾದ ಮಾನ್ಯ ದೇವೇಗೌಡರು ಒಂದು ಪತ್ರಿಕಾಗೋಷ್ಠಿ ಕರೆದು ಸಂಯುಕ್ತ ಕರ್ನಾಟಕಕ್ಕೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಮತ್ತು ಅಲ್ಲಿ ಇದ್ದ ಅವರ ಅಭಿಮಾನಿಗಳು ಅವರೆಲ್ಲಾ ಸೇರಿ ಕೊಟ್ಟಿರುವ ಹೇಳಿಕೆಯಲ್ಲಿ ಮೂಡಿ ಬಂದಂತಹ ವಿಚಾರಗಳನ್ನು ೨ ಲೈನ್ ಓದಿ ನಂತರ ಇದರ ಬಗ್ಗೆ ಕ್ಲಾರಿಫೈ ಮಾಡುತ್ತೇನೆ. ಶಾಂತಿ ಗ್ರಾಮದಲ್ಲಿ ಪಂಚಾಯತಿಯ ಅಧ್ಯಕ್ಷರು ಉಪಾಧ್ಯಕ್ಷರ ಚುನಾವಣೆ ಏನು ನಡೆಯಿತು ಅವರ ಬಗ್ಗೆ ಮಾತನಾಡುತ್ತಾ ಹೀಗೆ ಹೇಳಿದ್ದಾರೆ. ಗಲಾಟೆಯಾಯಿತು, ಆದ್ದರಿಂದ ಕೊಗಾಡಿದರು ಕುರ್ಚಿಗಳನ್ನೆಲ್ಲಾ ಎಸೆದಾಡಿದರು. ತಹಸೀಲ್ದಾರರು ಬಂದರು, ಪೋಲೀಸರು ಬಂದರು. ತಹಸೀಲ್ದಾರರು ಹೊರಗೆ ಹೋದರು. ಆನಂತರ ಅವರ ಜೇಬಿನಲ್ಲಿ ಕಾಂಗ್ರೆಸ್‌ನ ೭ ಜನ ಸದಸ್ಯರೂ ಹೋದರು. ತಹಸೀಲ್ದಾರರು ಇತರರು ಬರುತ್ತಾರೆಂದು ೧ ಗಂಟೆ ಕಾದರೂ ಯಾರೂ ಬರಲಿಲ್ಲ. ಆನಂತರ ವಿಚಾರಿಸಿದಾಗ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯನ್ನು ಮುಂದೂಡಲಾಗಿದೆ ಎಂದು ನನಗೆ ತಿಳಿಸಲಾಯಿತೆಂದು ಎಂದು ಬಿಳಿಯಮ್ಮ ತಿಳಿಸಿದರು. ಇದೆಲ್ಲಾ ನಡೆಯುವಾಗ ಶಾಸಕ ಹನುಮೇಗೌಡ ಮತ್ತು ಅವರ ಮಗ ಪಂಚಾಯತಿ ಕಟ್ಟೆ ಬಳಿ ಇದ್ದರೆಂದು ಹೇಳಿದರು. ಇದು ಅವರ ಪತ್ರಿಕಾಗೋಷ್ಠಿಯಲ್ಲಿ ಮೂಡಿ ಬಂದಂತಹ ವಿಚಾರಗಳಾಗಿತ್ತೆಂದು ಪೋಲೀಸರಿಗೆ ಮುಂಚೆಯೇ ನಾನು ಹೇಳಿದ್ದೆ. ಅಡಿಷನಲ್ ಎಸ್.ಪಿ.

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಎಸ್.ಪಿ. ಸಬ್ ಇನ್ಸ್‌ಪೆಕ್ಟರ್, ಹಿಂಗೆ ಬಹಳ ಜನ ಇದ್ದರು. ಜನತಾ ದಳದ ಕೆಲವರು ಬೇರೆ ಬಾರಿ ಬಾರಿ ಕುಳಗಳು ಇವರೆಲ್ಲಾ ಅಲ್ಲಿ ಇದ್ದರು. ಇವರೆಲ್ಲಾ ಇದ್ದಾಗ ವಿಚಾರವನ್ನು ತಿಳಿಯದೆ ಹನುಮೇಗೌಡರು ಅವರ ಮಗ ಇದ್ದಾರೆಯೆ ಹೇಳಿದ್ದಾರೆ. ನನ್ನ ಮಗ ನನ್ನಿಂದ ಬೇರೆ ಆಗಿದ್ದಾನೆ. ಅವನು ಅಲ್ಲಿಗೆ ಹೋಗಿದ್ದನೋ ಬಿಟ್ಟಿದ್ದನೋ ನನಗೆ ಗೊತ್ತಿಲ್ಲ. ಅದು ಅವನ ಸಮಾಚಾರ. ನಾನಂತೂ ಅಲ್ಲಿಗೆ ಹೋಗಿರಲಿಲ್ಲ. ನಾನು ಹೋಗಿರುವುದು ನಿಜವೆಂದಾದರೆ ನಾನು ಈ ಶಾಸನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ರಾಜಕೀಯದಿಂದ ನಿವೃತಿಯಾಗುತ್ತೇನೆ. ಸುಳ್ಳು ಹೇಳಿಕೆ ಕೊಟ್ಟು ಪ್ರಚೋದನೆ ಮಾಡಿಸಿದರಲ್ಲ ಜನತಾ ದಳದ ಅಧ್ಯಕ್ಷರು, ಬಾವಿ ಮುಖ್ಯ ಮಂತ್ರಿಗಳು, ಅವರು ನಾನು ಹೋಗದೇ ಇರುವುದು ಸುಳ್ಳು ಎಂದು ಗೊತ್ತಿದರೆ ಅವರು ಎಂ. ಪಿ. ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ರಾಜಕೀಯದಿಂದ ನಿವೃತ್ತರಾಗುತ್ತಾರಾ ಎಂದು ಈ ಸದನದ ಮುಖಾಂತರ ಅವರಿಗೆ ಸವಾಲನ್ನು ಹಾಕುತ್ತಿದ್ದೇನೆ. ಅವರು ಹರಿಜನ ಹೆಣ್ಣುಮಗಳ ಬಗ್ಗೆ ಭಾರಿ ಕಣ್ಣೀರುಸುರಿಸಿದ್ದಾರೆ. ಅಲ್ಲಿ ದೊಡ್ಡ ಕೆರೆ ಇದ್ದಿದ್ದರೆ ಅದು ತುಂಬಿ ಒಡೆದು ಹೋಗುತ್ತಿತ್ತೋ ಏನೋ ಗೊತ್ತಿಲ್ಲ. ಹರಿಜನ ಮಹಿಳೆ ಬಗ್ಗೆ ಅಷ್ಟು ಕಣ್ಣೀರು ಸುರಿಸಿದ್ದಾರೆ. ಅದೇ ಧಾಟಿಯಲ್ಲಿ ಇನ್ನೊಂದು ಏನು ನಡೆದಿದೆ, ಅದರ ಬಗ್ಗೆ ಮಾತು ಮೂಡಿ ಬಂದಿದೆ. ಪ್ರಲಾಪ ಮೂಡಿ ಬಂದಿದೆ. ಅಂದರೆ, ಅಲ್ಲಿ ಒಬ್ಬ ಹರಿಜನ ಅಧಿಕಾರಿ ನಿರ್ಮಾಣವಾಯ್ತು ಎಂಬ ಸಿನ್ಸಿಯರ್, ಆನೆಸ್ಟ್ ಆಫೀಸರ್ ಇದ್ದಾರೆ. ಅವರನ್ನು ರಾಹು ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ. ಏನು ಅಂತ ಕೇಳಲಿ. ಕಾಂಗ್ರೆಸ್ ಸದಸ್ಯರುಗಳನ್ನು ಅವರ ಜೀಪಿನಲ್ಲಿ ಕರೆದುಕೊಂಡು ಹೋದರು ಎಂದು ಇಲ್ಲಿ ಹೇಳಲಾಗಿದೆ. ಇದು ತಲೆ ಕೆಟ್ಟಿ ಹೇಳಿರುವ ಮಾತುಗಳೋ ಅಥವಾ ವಿವೇಕ ರಹಿತವಾಗಿ ಹೇಳಿರುವ ಮಾತೋ ಎಂಬುದನ್ನು ತಾವೇ ನೋಡಬೇಕು. ನಾವೇನು ಹೇಳಿದರೂ ಈ ದೇಶದ ಜನ ಕೇಳುತ್ತಾರೆಂದು ಹೇಳಿರುವ ಮಾತೋ ಹೇಗೆ ಎಂದು ತಾವು ಆಲೋಚನೆ ಮಾಡಬೇಕು. ಏನೋ ಒಂದು ಅಧಿಕಾರ ಸಿಕ್ಕಿದೆ, ಯಾರ್ಯಾರೊ ದುಡ್ಡು ಕೊಟ್ಟು ವ್ಯವಹಾರ ಮಾಡಿಸುತ್ತಾರೆ ಎಂದು ಹೇಳಿ ಮನಸೋಇಚ್ಛೆ ಕುಳಿತುಕೊಂಡು ಮನಸ್ಸಿಗೆ ಬಂದಂಗೆ ಮಾತನಾಡುವುದು, ಬೇಜವಾಬ್ದಾರಿಯಿಂದ ಮಾತನಾಡುವುದು ಏನಿದೆ. ಇದು ಖಂಡಿತ ಶ್ರೇಯಸ್ಸಲ್ಲ, ಯೋಗ್ಯವು ಅಲ್ಲ. ಒಳ್ಳೆಯದಲ್ಲ. ಉತ್ತಮವಲ್ಲ. ಈ ಮನುಷ್ಯನನ್ನು ನಾನು ಮೊದಲಿನಿಂದ ನೋಡಿದ್ದೇನೆ.

ಶ್ರೀ ಮಾಟಾಳ್ ನಾಗರಾಜ್.—ನಾನು ಜ್ಞಾಪಕ ಇಟ್ಟುಕೊಂಡಿದ್ದೇನೆ. ಏನೆಂದರೆ, ಈ ಸದನದಲ್ಲಿ ಇಲ್ಲದೇ ಇರತಕ್ಕಂಥ ಸದಸ್ಯರ ಬಗ್ಗೆ.....

ಶ್ರೀ ಕೆ. ಹೆಚ್. ಹನುಮೇಗೌಡ.—ಒಹೋ, ಕುಳಿತುಕೊಳ್ಳಿರಿ, ನನಗೆ ಗೊತ್ತು.

ಶ್ರೀ ಮಾಟಾಳ್ ನಾಗರಾಜ್.—ನನಗೆ ಗೊತ್ತು. ಅವರು ನಮ್ಮ ಮೇಲೆ ಬೀಳುತ್ತಾರೆ ಎಂದು ಗೊತ್ತು. ಈ ಮಾತು ಹೇಳಿದರೆ ಅವರು ನಮ್ಮ ಮೇಲೆ ಬೀಳುತ್ತಾರೆ ಎಂದು ಗೊತ್ತು. ಆದರೂ ಸಹಾ ನಾನು ನಮ್ಮನ್ನು ಸೌಜನ್ಯದಿಂದ ಕೇಳುತ್ತಿದ್ದೇನೆ. ಅದು ಪತ್ರಿಕೆಯಲ್ಲಿ ಬಂದಿರತಕ್ಕಂಥ ಹೇಳಿಕೆ. ಈ ಸದನದಲ್ಲಿ ಕೊಟ್ಟಿರತಕ್ಕಂಥ ಹೇಳಿಕೆಯಲ್ಲ. ಇದು ಪತ್ರಿಕೆಯಲ್ಲಿ ಬಂದಿರುವ ಹೇಳಿಕೆ. ಈ ಹೇಳಿಕೆಗೆ ಉತ್ತರ ಕೊಡುವುದಕ್ಕೆ ಅವರಿಗೆ ಅಧಿಕಾರ ಇದೆ. ನಾನು ಈ ಮಾತನ್ನು ಹೇಳುವುದಕ್ಕೆ ಮುಂಚೆ ಬಹಳ ಸಾರಿ ನಾವು ಮೂರು ಜನರು ಮಾತನಾಡಿಕೊಂಡೆವು. ನಾವು ಎನ್ದರೆ ಹನುಮೇಗೌಡರು ನಮ್ಮ ಮೇಲೆ ಬೀಳುತ್ತಾರೆ ಎಂದು ಅಂದುಕೊಂಡಪ್ಪ. ಆದರೆ ತಮ್ಮಲ್ಲಿ ನಾನು ಏನು ಕೇಳುತ್ತೇನೆ ಎಂದರೆ ತಾವು ಇದಕ್ಕೆ ಅವಕಾಶ ಕೊಡುವುದಾದರೆ ಅದು ನಿಮಗೆ ಸೇರಿದ್ದು ಏಕೆಂದರೆ ಅವರು ಇಲ್ಲಿ ಇಲ್ಲ. ಅದರಿಂದ ತಾವು ಅವಕಾಶ ಕೊಡುವುದಾದರೆ ಅದು ನಿಮಗೆ ಸೇರಿದ್ದು.

ಶ್ರೀ ಕೆ. ಹೆಚ್. ಹನುಮೇಗೌಡ.—ಅವರು ಇನ್ನೂ ಮುಖ್ಯಮಂತ್ರಿಯಾಗಲಿಲ್ಲ. ಇವರ ಕೆಲಸವನ್ನು ಅವರ ಹತ್ತಿರ ಹೋಗಿ ಇನ್ನೂ ಮಾಡಿಸಲಿಲ್ಲ. ಆದ್ದರಿಂದ ಸ್ವಲ್ಪ ಇವರು ಸಮಾಧಾನವಾಗಿ ಕೂರಬೇಕು. ನನಗಾಗಿರುವ ನೋವು ಈ ಮಾಟಾಳ್ ನಾಗರಾಜ್‌ಗೆ ಗೊತ್ತು ಅವರ ಕ್ಷೇತ್ರದಲ್ಲಿರುವ ಅಧಿಕಾರಿಗೆ ಆಗಿದ್ದರೆ ಆ ನೋವು ಅವರಿಗೆ ಅರ್ಥವಾಗುತ್ತಿತ್ತು. ಉಪದೇಶ ಮಾಡುವುದಕ್ಕೇನು ಸ್ವಾಮಿ. ಯಾರು ಏನು ಬೇಕಾದರೂ ಉಪದೇಶ ಮಾಡಬಹುದು. ದೇವರು ಎನ್ನುವವನ್ನು ಒಬ್ಬ ಇದ್ದಾನೆ. ಜನರು ಕಣ್ಣು ಮುಚ್ಚಿಕೊಂಡು ಕುಳಿತಿಲ್ಲ ಅದು ಬೇರೆ ವಿಚಾರ. ಮಾಟಾಳರೇ, ತಾವು ಸಾವಧಾನ ವಾಗಬೇಕು.

ಅಧ್ಯಕ್ಷರು. ತಾವು ಪದೇ ಪದೇ ಹನುಮೇಗೌಡರ ಹೆಸರನ್ನು ಹೇಳುವುದು ಅಷ್ಟು ಉತ್ತಮವಲ್ಲ ಎಂದು ನನಗನ್ನಿಸುತ್ತದೆ.

ಶ್ರೀ ಬಿ. ಆರ್. ಪಾಟೀಲ್.—ದೇವೇಗೌಡರು ಹೇಳದೆ ಇವನ್ನು ಪತ್ರಿಕೆಯವರೇ ಬರೆದಿದ್ದರೆ ಇದು ತಪ್ಪಾಗುತ್ತದಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಈ ಸದನದಲ್ಲಿ ಇಲ್ಲದೇ ಇರುವವರ ಹೆಸರನ್ನು ಹೇಳುವುದು ಅಷ್ಟು ಸರಿಯಲ್ಲ. ಇದೊಂದು ಕೆಟ್ಟ ಸಂಪ್ರದಾಯವನ್ನು ಹಾಕಿದಂತಾಗುತ್ತದೆ.

(ಗೊಂದಲ)

ಶ್ರೀ ವಿನಯಕುಮಾರ್ ಸೊರಕೆ.—ಅವರು ಸ್ಪಷ್ಟೀಕರಣ ಕೊಟ್ಟರೆ ತಪ್ಪೇನು ?

ಶ್ರೀ ಕೆ. ಹೆಚ್. ಹನುಮೇಗೌಡ.—ಇನ್ನೊಬ್ಬರಿಗೆ ಚುಚ್ಚಿಕೊಂಡಾಗ ತಮ್ಮ ಉಪದೇಶ, ಅನುಕಂಪ ಹರಿದು ಬರುತ್ತದೆ. ಆದರೆ ನಿಮಗೇ ಚುಚ್ಚಿಕೊಂಡಾಗ ಹೇಗೆ ಆಗುತ್ತದೆ ಎಂದು ಒಂದು ನಿಮಿಷ ಇಮ್ಯಾಜಿನ್ ಮಾಡಿ.

ಶ್ರೀ ವಾಟಾಳ್ ನಾಗರಾಜ್.—ನಮಗೆ ಗೊತ್ತಿತ್ತು. ಹನುಮೇಗೌಡರು ನಮ್ಮೆಲ್ಲರ ಬಿಳುತ್ತಾರೆ ಎಂದು ಪೂರ್ವಭಾವಿ ಯೋಚನೆ ಮಾಡಿಕೊಂಡೇ ಈ ಮಾತನ್ನು ಸತ್ಯವಾಗಿ ತಮಗೆ ಹೇಳಿಬಿಡೋಣ ಎಂದು ತಮಗೆ ಹೇಳಿದ್ದೇನೆ. ಇದರ ಬಗ್ಗೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಏನು ಹೇಳುತ್ತಾರೋ ಹೇಳಲಿ

ಶ್ರೀ ಕೆ. ಹೆಚ್. ಹನುಮೇಗೌಡ.—ದೇವೇಗೌಡರು ನಿನ್ನೆ...

ಅಧ್ಯಕ್ಷರು.—ಬೇರೆಯದನ್ನು ಮಾತನಾಡಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಆಯಿತು. ಹೆಸರನ್ನು ಹೇಳುವುದಿಲ್ಲ. ಜನತಾ ಪಕ್ಷದ ಅಧ್ಯಕ್ಷರು. ಮಾಜಿ ಅಧ್ಯಕ್ಷರು ಬಾವಿ ಮುಖ್ಯಮಂತ್ರಿಗಳು ಹಾಗೂ ವಾಟಾಳ್ ನಾಗರಾಜರ ಅಭಿಮಾನಿಗಳು. ಆಯಿತಾ ? ಇನ್ನು ಸಾಕು ಸುಮ್ಮನಿರಿ.

ಶ್ರೀ ವಾಟಾಳ್ ನಾಗರಾಜ್.—ತಾವು ಆ ರೀತಿ ಭಾವನೆ ಮಾಡಿಕೊಂಡರೆ ನಾನೇನು ಮಾಡಲಿ. ಅದಲ್ಲ ಭಾವನೆ. ತಾವು ಹೇಳುವಾಗ ಜವಾಬ್ದಾರಿಯಿಂದ ಹೇಳುತ್ತಿದ್ದೀರಿ. ಇಲ್ಲ ಎಂದು ನಾನು ಅಂದುಕೊಂಡಿಲ್ಲ. ಯಾರು ಇಲ್ಲಿ ತನ್ನನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಈ ಸದನದಲ್ಲಿ ಯಾರೂ ಇಲ್ಲದೇ ಇರುವಾಗ ಅಂತಹವರ ಬಗ್ಗೆ ಹೇಳುವುದು ಸರಿಯಲ್ಲವೆಂದು ನಾವು ಅಧ್ಯಕ್ಷರಿಗೆ ಇನ್ನೆಷ್ಟು ಸಾರಿ ಮನವಿ ಮಾಡೋಣ.

ಅಧ್ಯಕ್ಷರು.—ನಾನು ಹೇಳಿದ್ದೇನಲ್ಲ ಅವರಿಗೆ.

ಶ್ರೀ ವಾಟಾಳ್ ನಾಗರಾಜ್.—ಏನೂ ಹೇಳಿದರೂ ತಮ್ಮ ಮಾತನ್ನು ಅವರು ಕೇಳುತ್ತಿಲ್ಲವಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಅವರ ಹೆಸರನ್ನು ಹೇಳುವುದಿಲ್ಲ. ಜನತಾದಳದ ಅಧ್ಯಕ್ಷರು ಎಂದು ಹೇಳಬಹುದಲ್ಲ. ನಿನ್ನೆ ಅವರು ಹೇಳಿದ್ದುದು ಸಂಯುಕ್ತ ಕರ್ನಾಟಕದಲ್ಲಿ ಮತ್ತು ಕನ್ನಡಪ್ರಭದಲ್ಲಿ ಬಂದಿದೆ. ಅದನ್ನು ಜನರೂ ಓದಿದಾರೆ "ಕಾಂಗ್ರೆಸ್ ಸರ್ಕಾರದ ಬಗ್ಗೆ ಸಮರವನ್ನು ಸಾರಿದ್ದೇನೆ. ಕಾಂಗ್ರೆಸ್ ಪಕ್ಷವನ್ನು ವಿರೋಧಿ ಪಕ್ಷಕ್ಕೆ ತಳ್ಳುತ್ತೇನೆ. ತಾಲ್ಲೂಕು ಮಟ್ಟದ ಅಧಿಕಾರಿಗಳ ದುರುಪಯೋಗಪಡಿಸಿಕೊಂಡು ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಹಸ್ತಕ್ಷೇಪ ಮಾಡಿದ್ದಾರೆ" ಹೀಗೆಲ್ಲ ಹೇಳಿ ಕೊಂಡಿದ್ದಾರೆ. ಒಂದು ನಿಮಿಷ ಹಿಂದೆ ಹೋಗುತ್ತೇನೆ. ಒಂದೇ ಒಂದು ನಿಮಿಷ. ಜಾಸ್ತಿ ಹೊತ್ತು ಹೋಗುವುದಿಲ್ಲ. ಪಂಚಾಯಿತಿ ಎಲೆಕ್ಷನ್ ಶುರುವಾಯಿತು ಶುರುವಾದಾಗ ಇವರು ಅನುಯಾಯಿಗಳಿಗೆ ಆದೇಶ ಕೊಟ್ಟರು ಹೇಗಾದರೂ ಮಾಡಿ ಅಧಿಕಾರವನ್ನು ಹಿಡಿಯಬೇಕು. ಎಷ್ಟಾದರೂ ಖರ್ಚಾಗಲಿ, ಯಾವುದೇ ರೂಪಾಂತರದಲ್ಲಿ ನೀವು ಅಧಿಕಾರವನ್ನು ಹಿಡಿದುಹಾಕಬೇಕು ಎಂದು ಹೇಳಿ ಎಲೆಕ್ಷನ್ ನಡೆಯಿತು ಅವರು ಏನೇನು ಮಾಡಿದರು ಎಂದು ಹೇಳಿದರೆ ವಾಟಾಳ್ ನಾಗರಾಜ್‌ರವರು ಎದ್ದುನಿಂತು ಕೂಳ್ಳುತ್ತಾರೆ. ಆದ್ದರಿಂದ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದು ಅವರಿಗೂ ಗೊತ್ತಿದೆ.

ಶ್ರೀ ವಾಟಾಳ್ ನಾರಾಜ್.—ಇದಕ್ಕೆ ಉತ್ತರ ಕೊಡುವವರು ಯಾರು? ನೀವು ಕೊಡುತ್ತೀರಾ? ತಾವು ಕೊಡುತ್ತೀರಾ? ಇದಕ್ಕೆ ಯಾರು ಕೊಡುತ್ತೀರಿ ಹೇಳಿ. ಸಂಸದೀಯ ವ್ಯವಹಾರಗಳ, ಸಚಿವರೇ ನೀವು ಕೊಡುತ್ತೀರಾ ? ನೀವು ಆಲಿಸುತ್ತಿದ್ದೀರಿ.

ಅಧ್ಯಕ್ಷರು.—ಮಾನ್ಯ ಹನುಮೇಗೌಡರೇ, ಅದರ ಬಗ್ಗೆ ಕ್ಲಾರಿಫಿಕೇಷನ್ ಅಷ್ಟೇ ಕೊಟ್ಟುಬಿಡಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಕ್ಲಾರಿಫಿಕೇಷನನ್ನು ಕೇಳಂವುದಕ್ಕೆ ಇಷ್ಟೆಲ್ಲ ಹೇಳುತ್ತಿರುವುದು. ಸ್ವಾಮಿ ಎಲೆಕ್ಷನ್ ನಡೆಯಿತು ಎಲೆಕ್ಷನ್ ನಡೆದಾದಮೇಲೆ ಅವರು ಜನತಾದಳದ ಅಧ್ಯಕ್ಷರು ಹೇಳಿಕೆ ಕೊಡುತ್ತಾ ಬಂದರು. ಏನೆಂದರೆ, ನೂರಕ್ಕೆ ಎಪ್ಪತ್ತೈದು ಭಾಗ ಜನತಾ ದಳದ ಪಂಚಾಯಿತಿ ಸದಸ್ಯರು ಗಳು ಚುನಾಯಿತರಾಗಿದ್ದಾರೆ ಎಂದು ಹೇಳಿಕೆ ಕೊಟ್ಟರು. ಬಿ. ಜೆ. ಪಿ. ಯವರು ನಾವು ೩೫ ಪರ್ಸೆಂಟ್ ತೆಗೆದುಕೊಂಡಿದ್ದೇವೆ ಎಂದು ಹೇಳಿದರು. ಅಂದರೆ ೩೫+೭೫=೧೦೫ ಆಯಿತು ಇವರುಗಳ ಲೆಕ್ಕದಂತೆ ನಮ್ಮ ಕಾಂಗ್ರೆಸ್‌ಗೆ ಏನೂಇಲ್ಲ. ಆದರೂ ನಾವು ಯಾರೂ ಮಾತನಾಡಲಿಲ್ಲ. ನಾವೇ ಆಗಲಿ ನಮ್ಮ ಮುಖಂಡರೇ ಆಗಲಿ, ಅಥವಾ ನಮ್ಮ ಕಾರ್ಯಕರ್ತರೇ ಆಗಲಿ ಮಾತನಾಡಲಿಲ್ಲ. ಕೆಲವರು ನನಗೆ ಬಂದು ಹೇಳಿದರು. ನೀವು ಒಂದು ಹೇಳಿಕೆ ಕೊಡಿ ಎಂದರು. ಅದಕ್ಕೆ ನಾವು ಹೇಳಿದೆವು.....

SRI QUAMARUL ISLAM.—Elections were not held on Party Basis.

ಅಧ್ಯಕ್ಷರು.—ಹೌದು. ಪಾರ್ಟಿ ಬೇಸಿಸ್ ಮೇಲೆ ಆಗಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಇವರ ಹಿನ್ನೆಲೆಯನ್ನು ಕೊಟ್ಟು ಹೇಳಿಕೆಯನ್ನು ಕೊಡುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ.—ಚುನಾವಣೆ ಬಗ್ಗೆ ಎರಡು ದಿವಸ ಚರ್ಚೆಯಾಗಿದೆ. ಈ ಸದನದ ಸದಸ್ಯರು ಅಲ್ಲದೇ ಇರತಕ್ಕಂಥವರ ಬಗ್ಗೆ ಮಾತನಾಡುವುದು ಅಷ್ಟು ಒಳಿತಲ್ಲ ಎಂದು ಕಾಣುತ್ತದೆ.

(ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ.—ನನ್ನ ಸ್ನೇಹಿತರು ಎರಡು ನಿಮಿಷ ತಾಳ್ಮೆಯಿಂದ ಕುಳಿತು ಕೊಳ್ಳಲಿ. ಇಪತ್ತು ನನಗೆ ಆಗಿರುವ ನೋವು ನಾಳೆ ಬಂದುದಿನ ಅವರಿಗೂ ಆಗುತ್ತದೆ. ಅದರ ಬಗ್ಗೆ ಚಿಂತನೆ ಮಾಡುವುದು ಬೇಡ. ಈ ರೀತಿ ಕೊಟ್ಟಾದ ಮೇಲೆ ಎಲೆಕ್ಷನ್ ಬಿದ್ದರೂ ಬೀಳಲಿ ನೋಡಿ ಕೊಳ್ಳೋಣವೆಂದು ನಾವು ಹೇಳಿದೆವು. ಆಗ ಜನತಾದಳದ ಮುಖಂಡರು ಘೋಷಣೆ ಕೂಗಿದರು. ಏನೆಂದರೆ, ''ಕಾಂಗ್ರೆಸ್ ಪಕ್ಷ ದೂಳಿಪಟ. ಮುಂದಿನ ಚುನಾವಣೆಯಲ್ಲಿ ಜನತಾ ದಳದ ಜಯಭೇರಿ. ಮುಂದಿನ ಮುಖ್ಯಮಂತ್ರಿ ನಾನೇ''.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇವರು ಯಾರು ಸ್ವಾಮಿ ?

ಶ್ರೀ ಕೆ. ಹೆಚ್. ಹನುಮೇಗೌಡ.—ಈ ಹೇಳಿಕೆಗಳೆಲ್ಲಾ ಬಂದವು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಈ ಬಗ್ಗೆ ಹೇಳಿಕೆಯನ್ನು ಮಾನ್ಯ ಜಿ. ಪುಟ್ಟಸ್ವಾಮಿ ಗೌಡ್ರು ಹೇಳಲಿ ಇದೇನು ಎಂದು ನೀವು ಹೇಳಿ.

ಶ್ರೀ ಮಂಜುನಾಥ್ ಸಿ. ಕನ್ನೂರ್.—ಅವರ ಕಷ್ಟವನ್ನು ಅವರು ಹೇಳಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನಾನು ಅವರನ್ನು ಅಡ್ಡಿಪಡಿಸುತ್ತಿಲ್ಲ. ಆದರೆ ಈಗ ಅವರು ಹೇಳಿರತಕ್ಕಂಥ ಮಾತುಗಳಿಗೆ ಸ್ಪಷ್ಟೀಕರಣ ಕೊಡತಕ್ಕಂಥವರು ಇಲ್ಲಿ ಯಾರಿದ್ದಾರೆ ? ತಾವು ಅವಕಾಶ ಕೊಟ್ಟಿದ್ದರೆ ನಮ್ಮದೇನೂ ಇಲ್ಲ.

ಅಧ್ಯಕ್ಷರು.—ಆ ವ್ಯಕ್ತಿಗಳ ಬಗ್ಗೆ ಪ್ರಾತಸನಾಡುವುದಕ್ಕೆ ನಾವೇನು ಹೇಳಿಲ್ಲ. ಯಾವ ವ್ಯಕ್ತಿಗಳ ಹೆಸರನ್ನು ಸಹ ತೆಗೆದುಕೊಂಡು ತಮ್ಮ ರಕ್ಷಣೆ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಸುತ್ತಿ ಬಳಸಿ ಯಾವ ವ್ಯಕ್ತಿಯ ಹೆಸರನ್ನು ಹೇಳಬೇಕೊ ಅದಕ್ಕೆ ಹೋಗುತ್ತಿದ್ದಾರೆ.

ಅಧ್ಯಕ್ಷರು.—ವ್ಯಕ್ತಿಗಳ ಬಗ್ಗೆ ಹೇಳುವುದಕ್ಕೇ ನಾವು ಅಸ್ಪದವನ್ನೇ ಕೊಟ್ಟಿಲ್ಲ.

ಶ್ರೀ ಸೋಮಪ್ಪ ಸುವರ್ಣ.—ಅವರಿಗೆ ಇರತಕ್ಕಂಥ ತೊಂದರೆಯನ್ನು ಅವರು ಹೇಳಿಕೊಂಡಿದ್ದಾರೆ. ಅವರ ಮೇಲೆ ಇರುವ ಆಪಾದನೆಯನ್ನು ಹೇಳಿಕೊಂಡಿದ್ದಾರೆ.

SRI QAMARUL ISLAM.—This is a discussion on the Budget.

MR. SPEAKER.—He has sought my permission to give some clarification. It is not the Budget speech.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಈ ತರಹ ಅವರು ಯಾರು ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳಲಿಕ್ಕೆ ಆಗದೇ ಇರತಕ್ಕಂಥ ಸಂದರ್ಭದಲ್ಲಿ ಅವರು ಪ್ರಾತನಾಡುತ್ತಿದ್ದಾರೆ. ತಾವು ಅವಕಾಶ ಕೊಡುತ್ತಿದ್ದರೆ ನಾವುಗಳು ಇಲ್ಲಿ ಕುಳಿತುಕೊಂಡು ಅದನ್ನು ಕೇಳುವುದು ಸರಿಯೇ ?

ಅಧ್ಯಕ್ಷರು.—ಅವರು ತಮ್ಮ ಕ್ಲಾರಿಫಿಕೇಷನನ್ನು ಕೊಡುತ್ತಿದ್ದಾರೆ. ಯಾವುದೇ ವ್ಯಕ್ತಿಗಳ ಮೇಲೆ ಆರೋಪ ಪ್ರಾಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈ ಸದನದಲ್ಲಿ ಪ್ರಾತನಾಡಿದ್ದರೆ ಕ್ಲಾರಿಫಿಕೇಷನ್ ಯಾರಾದರು ಹೊರಗಡೆ ಪತ್ರಿಕೆಯಲ್ಲಿ ಇವರ ಬಗ್ಗೆ ಹೇಳಿಕೆ ಕೊಟ್ಟಿದ್ದರೆ ಇವರೂ ಪತ್ರಿಕೆಯಲ್ಲಿ ಹೇಳಿಕೆ ಕೊಡಬೇಕೇ ಹೊರತು ಈ ಸದನದಲ್ಲಿ ಹೇಳಿದರೆ ಹೇಗೆ ? ಹೊರಗಡೆ ಹೇಳಿದ್ದಕ್ಕೆ ಇಲ್ಲಿ ಬಂದು ನಾವು ಉತ್ತರ ಕೊಡುತ್ತೇವೆ ಎನ್ನುವುದಾದರೆ ಇದೊಂದು ಹೊಸ ಸಂಪ್ರದಾಯವನ್ನಾಗಿ ತಾವು ಮಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು.—ಇದಕ್ಕೆ ಸಾಕಷ್ಟು ಹಿಂದೆ ಅವಕಾಶವನ್ನು ಕೊಟ್ಟಿದೆ. ಇದೇನು ಹೊಸ ಸಂಪ್ರದಾಯವಲ್ಲ. ಅವರ ಮೇಲೆ ಏನು ಒಂದು ಆರೋಪ ಮಾಡಿದ್ದಾರೆ. ಆದರ ಬಗ್ಗೆ ಕ್ಲಾರಿಫಿಕೇಷನ್ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ವಾಟಾಳ್ ನಾಗರಾಜ್‌ರವರೇ, ನಾನು ತಮ್ಮಿಂದ ರೂಲ್ಸ್ ಕಲಿಯಬೇಕಾಗಿಲ್ಲ. ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ. ರುಕ್ಮಯ್ಯ ಪೂಜಾರಿ.—ಅವರು ಈ ಸದನದಲ್ಲಿ ಆರೋಪ ಮಾಡಿಲ್ಲ. ಹೊರಗಡೆ ಆರೋಪ ಮಾಡಿದ್ದಾರೆ. ಸದನದಲ್ಲಿ ಪ್ರಾಡಿದ್ದಾರೆ. ಸದನದಲ್ಲಿ ಪ್ರಾಡಿದ್ದರೆ ಹೇಳಿಕೆ ಕೊಡಲಿ.

ಅಧ್ಯಕ್ಷರು.—ತಾವು ಮುಗಿಸಿಬಿಡಿ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—ವಾಟಾಳ್ ನಾಗರಾಜ್‌ರವರು ಪ್ರಾತನಾಡುವಾಗ ಯಾರೂ ಪ್ರಾತನಾಡಬಾರದು ಎಂದು ಹೇಳುತ್ತಾರೆ. ಅವರು ಈಗ ಏತಕ್ಕೆ ಪ್ರಾತನಾಡುತ್ತಿದ್ದಾರೆ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ತಮಗೆ ನಾನು ವಿನಯದಿಂದ ಕೇಳುತ್ತೇನೆ. ನಾನೇನು ಯಾರನ್ನು ಅಡ್ಡಿಪಡಿಸಬೇಕು ಎಂದು ಇಲ್ಲ. ಈಗ ಅವರು ಬೇರೆಯವರು ಒಂದು ಹೇಳಿಕೆಯನ್ನು ಕೊಟ್ಟಿರುವ ಬಗ್ಗೆ ಇಲ್ಲೇ ಹೇಳುತ್ತಿದ್ದಾರೆ. ಒಪ್ಪುತ್ತೇನೆ. ಇದು ಸರಿ ಇಲ್ಲ ಎಂದು ಹೇಳತಕ್ಕಂಥವರು ಇಲ್ಲವಲ್ಲ ಸ್ವಾಮಿ, ಇದು ಎಲ್ಲಿ ನಡೆದಿರತಕ್ಕಂಥದ್ದು ?

ಅಧ್ಯಕ್ಷರು.—ಇಲ್ಲಿ ಇಲ್ಲ ಎನ್ನುವ ಪ್ರಶ್ನೆ ಇಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ಅವರ ಗ್ರಾಮದಲ್ಲಿ ಏನೋ ಗಲಭೆಯಾಗಿದೆ. ಶಾಂತಿ ಕಾಪಾಡುವುದಕ್ಕೆ ಮಾತನಾಡುತ್ತಿದ್ದಾರೆ. ಏತಕ್ಕೆ ತಕರಾರು ? ಇರಲಿಬಿಡಿ. ಮಾತನಾಡಲಿ.

ಶ್ರೀ ಕೆ. ಹೆಚ್. ಹನುಮೇಗೌಡ.—ವಾಟಾಳ್ ನಾಗರಾಜ್‌ರವರು ಏನಾದರೂ ಮತ್ತೆ ಇನ್ನೊಂದು ಸಾರಿ ಎದ್ದರೆ ಅವರು ಮಾತನಾಡುವಾಗಲೆಲ್ಲ ನಾನು ಸಹ ಹತ್ತು–ಹತ್ತು ನಿಮಿಷಕ್ಕೆ ಎದ್ದುನಿಂತುಕೊಳ್ಳುತ್ತೇನೆ. ಅದ್ದರಿಂದ ದಯಮಾಡಿ ತಾವು ಸುಮ್ಮನೆ ಕುಳಿತುಕೊಳ್ಳಿ. ನಾನು ಮಾತನಾಡುತ್ತೇನೆ.

ಅಧ್ಯಕ್ಷರು.—ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್.—ನಾನು ಹೊರಗಡೆ ಹೋಗುತ್ತೇನೆ. ತಾವು ಅವಕಾಶ ಕೊಡಿ. ಈ ರೀತಿ ಮಾತುಗಳನ್ನು ಕೇಳುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ರಣರಂಗ ಮಾಡುವುದಲ್ಲ ಅವರು. ಸದನದ ಸದಸ್ಯರು ಇಲ್ಲದೇ ಇರುವಾಗ ಅವರ ವಿರುದ್ಧ ಮಾತನಾಡುವುದಕ್ಕೆ ಅವಕಾಶ ಕೊಡುವುದಾದರೆ, ಈ ಸದನ ಏತಕ್ಕೆ ಬೇಕು ? ಈ ಸದನವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು, ಕಮರುಲ್ ಇಸ್ಲಾಂರವರು,

ಶ್ರೀ ರುಕ್ಮಯ್ಯ ಪೂಜಾರಿಯವರು ಸದನದಿಂದ ಹೊರನಡೆದರು.)

ಶ್ರೀ ಕೆ. ಎಚ್. ಹನುಮೇಗೌಡ.—ಗ್ರಾಮ ಪಂಚಾಯತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಹಸ್ತಕ್ಷೇಪ ನಡೆದಿದೆ, ಬೇಕಾದಷ್ಟು ಅನ್ಯಾಯಗಳು ನಡೆದಿದೆ ಎನ್ನುವುದರ ಬಗ್ಗೆ ವಿವರಗಳನ್ನು ಅವರು ಕೇಳಿಕೊಂಡಿದ್ದಾರೆ. ನಾನು ಸರ್ಕಾರದ ಬಗ್ಗೆ ಮತ್ತು ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ೨–೩ ವಿಷಯಗಳನ್ನು ಮಾತನಾಡಿ ಸ್ಪಷ್ಟೀಕರಣ ಕೊಡುತ್ತೇನೆ. ೧೦ ದಿವಸಗಳ ಹಿಂದೆ ಪಟ್ಟದಕೆರೆ ಎಂಬ ಗ್ರಾಮದಲ್ಲಿ ಗ್ರಾಮ ಪಂಚಾಯತಿ ಚುನಾವಣೆ ನಡೆಯಿತು. ಚುನಾವಣೆಯಲ್ಲಿ ಒಟ್ಟು ೧೫ ಸದಸ್ಯರು ಆಯ್ಕೆಯಾಗಿದ್ದು, ಅದರಲ್ಲಿ ೧೨ ಜನ ಕಾಂಗ್ರೆಸ್‌ನವರು ಉಳಿದ ಮೂರು ಜನ ಜನತಾ ದಳಕ್ಕೆ ಸೇರಿದವರು. ಚುನಾವಣೆ ಸಂದರ್ಭದಲ್ಲಿ ನಮ್ಮ ಪಕ್ಷಕ್ಕೆ ಸೇರಿದ ಕೆಲವರು ಸತ್ತರು, ಅದರ ಬಗ್ಗೆ ನನ್ನ ಚಿಂತೆ ಇಲ್ಲ. ಚುನಾವಣೆ ೧೨ ಗಂಟೆಗೆ ಇದ್ದು, ಹರಿಜನ ಮಹಿಳೆಯಾದ ಭಾಗ್ಯಮ್ಮ ಎಂಬುವವರು ಕಾಂಗ್ರೆಸ್ ಪಕ್ಷದವರೊಡನೆ ಸೇರಿಕೊಂಡು ವೋಟಿಂಗ್ ಹೋಗುವ ತಯಾರಿಯಲ್ಲಿದ್ದಾಗ ಜನತಾ ದಳದ ಕೆಲವು ಮುಖಂಡರುಗಳು ಬಂದು ಆಕೆಯ ಗಂಡನನ್ನು ಬಲವಂತವಾಗಿ ಎಳೆದುಕೊಂಡು ಹೋದರು.

ಅಧ್ಯಕ್ಷರು.—ಈಗ ತಮ್ಮ ಮೇಲೆ ಏನು ಆರೋಪ ಇದೆ, ಅದನ್ನು ನಿರಾಕರಿಸುವ ಬಗ್ಗೆ ಮಾತ್ರ ಹೇಳಿ, ಉಳಿದ ವಿಷಯಗಳನ್ನು ಪ್ರಸ್ತಾಪಿಸುವುದು ಬೇಡ.

ಶ್ರೀ ಕೆ. ಎಚ್. ಹನುಮೇಗೌಡ.—ತಾವೇ ಇದನ್ನೆಲ್ಲಾ ಮಾಡಿ ನಮ್ಮ ಮೇಲೆ ಹೇಗೆ ಗೂಬೆ ಕೂರಿಸುತ್ತಾರೆ ಎನ್ನುವುದನ್ನು ಹೇಳುತ್ತಿದ್ದೇನೆ. ಅದನ್ನು ಹೇಳಬಾರದೆ?

ಅಧ್ಯಕ್ಷರು.—ಇದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳಿ. ಚುನಾವಣೆಯ ವಿಚಾರ ಹೇಳಬೇಡಿ, ತಮ್ಮ ಮೇಲಿನ ಆರೋಪವೇನಿದೆ, ಅದನ್ನು ನಿರಾಕರಣೆ ಮಾಡಿ.

ಶ್ರೀ ಕೆ. ಎಚ್. ಹನುಮೇಗೌಡ.—ನಾನು ಸ್ಪಷ್ಟಪಡಿಸುತ್ತಿರುವುದೇನೆಂದರೆ, ಅವರೇ ಅಕ್ರಮಗಳನ್ನು ನಾವು ನಮ್ಮ ಮೇಲೆ ಹೇಳಿದ್ದಾರೆನ್ನುವುದರ ಬಗ್ಗೆ ನಾನು ಉದಾಹರಣೆ ಕೊಡುತ್ತಿದ್ದೇನಷ್ಟೆ. ಇದು ನನ್ನ ಪಾರ್ಯಾಯದ ಪ್ರಶ್ನೆ. ತಮಗೆ ಪೊಟ್ ಹಾಕಿಲ್ಲವೆಂದು ಹಾಡು ಹಗಲೇ ಆ ಹರಿಜನ ಮಹಿಳೆಯನ್ನು ಎಳೆದುಕೊಂಡು ಹೋದರು. ಅವರು ಹೇಗೆ ಅನ್ಯಾಯ ಮಾಡಿ ನಮ್ಮ ಮೇಲೆ ಗೂಬೆ ಕೂರಿಸುತ್ತಾರೆಂಬುದನ್ನು ಹೇಳುತ್ತಿದ್ದೇನೆ. ಎರಡನೆಯದಾಗಿ, ದೊಡ್ಡಗೆಂಡಗೆರೆ ಎಂಬುದೊಂದು ಪಂಚಾಯತಿ. ಅಲ್ಲಿಯೂ ಚುನಾವಣೆ ನಡೆಯಿತು. ೧೩ ಜನ ಸದಸ್ಯರು ಆಯ್ಕೆಯಾಗಿದ್ದು, ಅವರಲ್ಲಿ ೧೧ ಜನರು ನಮ್ಮ ಪಕ್ಷದವರಾಗಿದ್ದರೆ ಉಳಿದ ಇಬ್ಬರು ಜನತಾ ದಳದವರು ಅರಿಸಿ ಬಂದಿದ್ದರು. ಅಲ್ಲಿನ ಚುನಾವಣೆಯ ಸಂದರ್ಭದಲ್ಲಿ ನಮ್ಮ ಪಕ್ಷಕ್ಕೆ ಸೇರಿದ ಕೆಲವರನ್ನು ಎಳೆದುಕೊಂಡು ಹೋದರು. ಏಕೆಂದರೆ, ೬ ಮತಗಳಲ್ಲಿ ಗೆದ್ದು ಬಂದಿದ್ದೆವು. ಗೆದ್ದ ದಿವಸದಿಂದ ಇಲ್ಲಿಯವರೆಗೂ ಅವರಿಗೆ ಪೋಲೀಸ್ ರಕ್ಷಣೆ ಕೊಡಿಸಿದ್ದೇನೆ. ಹೀಗಿದ್ದರೂ ಜನತಾ ದಳದವರು ಕೆಲವು ಗೂಂಡಾಗಳನ್ನು ಬಿಟ್ಟು ದಿನಾ ಅವರ ಮನೆಗಳನ್ನು ಒಡೆಯುವ ಕೆಲಸದಲ್ಲಿ ನಿರತರಾಗಿ ಅನ್ಯಾಯವೆಸಗುತ್ತಿದ್ದಾರೆ.

ಚುನಾವಣೆ ನಡೆದು ಅಭ್ಯರ್ಥಿಗಳು ಗೆದ್ದ ದಿವಸವೇ ಊರಿನಲ್ಲಿನ ಕೆಲವರ ಮನೆಗಳು ದೂಳಿ ಪಟವಾದವು. ಇಂತಹ ಒಂದು ಉದಾಹರಣೆಯನ್ನು ನಾವು ಕಾಂಗ್ರೆಸ್‌ನಲ್ಲಿದ್ದುಕೊಂಡು ಮಾತಾಡಲ್ಲ. ಮೂರನೆಯ ಉದಾಹರಣೆಯೇನೆಂದರೆ, ಹೊನ್ನೆ ದಿವಸ ದಾಸನಕೊಪ್ಪ–ಹರಳಳ್ಳಿಯಲ್ಲಿ ಪಂಧ್ನಾಹ್ನ ೧೨ ಗಂಟೆಗೆ ಚುನಾವಣೆ ನಡೆಯಿತು. ಚುನಾವಣೆ ನಡೆಯುವುದಕ್ಕಿಂತ ಮುಂಚಿತವಾಗಿ ಆದರೆ, ೧೧–೩೦ ಗಂಟೆಗೆ ಚುನಾವಣಾಧಿಕಾರಿ ತನ್ನೊಂದಿಗೆ ಕಡತಗಳನ್ನು ತೆಗೆದುಕೊಂಡು ಬರುವಾಗ ಪೋಲೀಸ್ ಠಾಣೆಯಿಂದ ೩೦೦ ಗಜ ದೂರದಲ್ಲಿ ಜನತಾ ದಳದ ಮುಖಂಡರುಗಳು ಬಲವಂತವಾಗಿ ತಡೆದು ನಿಲ್ಲಿಸಿ ಅಧಿಕಾರಿ ಕೈಯಲ್ಲಿ ಹಿಡಿದಿದ್ದ ನಾಮಿನೇಷನ್‌ಗೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ಕಿತ್ತುಕೊಂಡು ಹೋದರು. ಇದರ ಪರಿಣಾಮ ಚುನಾವಣೆ ಮುಂದೂಡಲ್ಪಟ್ಟಿತು. ಹಾಡು ಹಗಲೆ ಪೋಲೀಸ್ ಠಾಣೆ ಎದುರುಗಡೆ ಈ ಪ್ರಸಂಗ ನಡೆದಿದೆ. ಆ ಸಂದರ್ಭದಲ್ಲಿ ಜನತಾ ದಳದ ಮುಖಂಡರು, ಕಾರ್ಯಕರ್ತರೆಲ್ಲಾ ಇದ್ದರು. ಚುನಾವಣೆ ಮುಂದೂಡಿದ ಕಾರಣವೇನೆಂದರೆ, ಆ ಪಂಚಾಯತಿಯಲ್ಲಿ ನಾವು ಬಹುಮತದಲ್ಲಿದ್ದೆವು

ಅಧ್ಯಕ್ಷರು.—ಈ ರೀತಿ ತಾವು ಬೇರೆ ವಿಚಾರಗಳನ್ನು ಪ್ರಸ್ತಾಪಿಸುತ್ತಾ ಹೋದರೆ ಕೇಳುವವರಾರು? ತಮಗೆ ನಾನು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದು, ಸ್ಪಷ್ಟೀಕರಣ ನೀಡುವುದಕ್ಕೆ ಮಾತ್ರ. ತಾವು ಬೇರೆಲ್ಲಾ ವಿಷಯಗಳನ್ನು ಹೇಳುತ್ತಾ ಹೋಗುವುದು ಸರಿಯಲ್ಲ. ತಮ್ಮ ಮೇಲೆ ಬಂದಂಥ ಆರೋಪವೇನಿದೆ, ಆ ಬಗ್ಗೆ ಮಾತನಾಡಿ ಆರೋಪವನ್ನು ನಿರಾಕರಿಸಿ.

ಶ್ರೀ ಕೆ. ಎಚ್. ಹನುಮೇಗೌಡ.—ನಾನು ಇನ್ನೊಂದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಹರಿಜನ ಮಹಿಳೆಯರಿಗೆ ಅನ್ಯಾಯವಾಗಿದೆಯೆಂದು ಜನತಾ ದಳದವರು ಹೇಳಿದ್ದಾರೆ. ಭೂನಳ್ಳಿ ಮತ್ತು ಗವಿನಳ್ಳಿ ಎಂಬ ಎರಡೂ ಊರು ಸೇರಿ ಒಂದು ಪಂಚಾಯತಿ ಆಗಿದೆ. ಅಲ್ಲಿ ಹರಿಜನಕ್ಕೆ ಸೇರಿದ ಹಾಲಮ್ಮ ಎಂಬ ಮಹಿಳೆ ಬಿ. ಎ., ಪದವೀಧರರು, ಆ ಊರಿನ ಮುಖಂಡರ ಮಗ ಮತ್ತು ಸೊಸೆ ತೀರಿ ಹೋದ ದಿವಸ ಊರಿನವರೆಲ್ಲರೂ ಹಾಸನ ನಗರಕ್ಕೆ ತೆರಳಿದರು. ಆಗ ಹಾಲಮ್ಮ ಎಂಬ ಹರಿಜನ ಮಹಿಳೆ ಇತರ ಏಳು ಜನರನ್ನು ಜೊತೆಯಲ್ಲಿ ಕರೆದುಕೊಂಡು ನಾಮಿನೇಷನ್ ಮಾಡುವುದಕ್ಕೆ ಹೋದಾಗ ಊರಿನ ಗಡಿಯಲ್ಲಿ ಜನತಾ ದಳದ ಮುಖಂಡರು ಮತ್ತು ಕಾರ್ಯಕರ್ತರು ಊರೊಳಗೆ ಬಿಡದೆ ಅವರನ್ನು ತಡೆದರು. ಆಕೆಯಿಂದ ಉಮೇದುವಾರಿಕೆ ಫೈಲ್ ಮಾಡಿಸುವುದಕ್ಕೆ ಅವಕಾಶ ಕೊಡಲಿಲ್ಲ. ಈ ಬಗ್ಗೆ ಆಕೆ ಒಂದು ಹೇಳಿಕೆ ಕೊಟ್ಟಿದ್ದು, ಒಂದು ಅರ್ಜಿಯನ್ನೂ ಸಹ ಕೊಟ್ಟಿದ್ದಾರೆ. ಯಾವಾಗ ಉಮೇದುವಾರಿಕೆ ಇಲ್ಲದೇ ಹೋಯಿತು ಆಗ ಅವರ ಕಡೆಯವರನ್ನೇ ಚುನಾಯಿತರಾದರೆಂದು ಘೋಷಣೆ ಮಾಡಿಕೊಂಡರು. ಹರಿಜನರ ಬಗ್ಗೆ ಇಷ್ಟೊಂದು ಕಣ್ಣೀರನ್ನು ಸುರಿಸತಕ್ಕ ಜನತಾದಳದ ಮುಖಂಡರು ಮತ್ತು ಅವರ ಪಕ್ಷದವರು, ಅದೇ ಹರಿಜನ ಮಹಿಳೆ ಉಮೇದುವಾರಿಕೆಯನ್ನು ಫೈಲು ಮಾಡಲು ಹೋದಾಗ, ಅವಳನ್ನು ಊರಿನ ಹೊರಗಡೆ, ಅಂದರೆ ಊರಿನ ಎಂಟ್ರೆನ್ಸ್‌ನಲ್ಲಿನ ರೋಡಿನಲ್ಲಿಯೇ ತಡೆದರು. ತಾವು ಪೋಲೀಸ್‌ನವರು ಇರಲಿಲ್ಲವೇ ಎಂದು ಕೇಳಬಹುದು. ಪೋಲೀಸ್‌ನವರು ಬಂಧೋಬಸ್ತ್ ಮಾಡುತ್ತಿದ್ದುದು ಪಂಚಾಯಿತಿಯ ಹಾಲ್‌ನ ಹತ್ತಿರ. ಆ ರೀತಿ ನೂರಾರು ಜನರು ನಿಂತುಕೊಂಡು ಆ ಮಹಿಳೆಯನ್ನು ಊರಿನ ಒಳಗಡೆ ಬಿಡದಂತೆ ತಡೆದರು.

ಅಧ್ಯಕ್ಷರು.—ಹನುಮೇಗೌಡರೇ ಕುಳಿತುಕೊಳ್ಳಿ. ಮಾನ್ಯ ಅನಂತಕೃಷ್ಣರವರೆ, ತಾವು ಮಾತನಾಡಿ. ಇಲ್ಲದಿದ್ದರೆ ತಾವು ಸಮಯವನ್ನು ಕಳೆದುಕೊಳ್ಳುತ್ತೀರಿ.

ಶ್ರೀ ಕೆ.ಹೆಚ್. ಹನುಮೇಗೌಡ.—ಅನಂತರ ಶಾಂತಿಗ್ರಾಮದಲ್ಲಿ ಒಟ್ಟು ೧೭ ಜನ ಸದಸ್ಯರು. ಅದರಲ್ಲಿ ಕಾಂಗ್ರೆಸ್ ೧೧, ದಳದವರು ೫–೬ ಜನ ಸದಸ್ಯರು. ಈ ದಳದವರು ಏನು ಮಾಡಿದರೆಂದರೆ ಕಾಂಗ್ರೆಸ್‌ನ ಮೂರು ಜನ ಸದಸ್ಯರನ್ನು ಹೊತ್ತುಕೊಂಡು ಹೋಗಿ ಅಶೋಕ ಹೋಟೆಲ್‌ನಲ್ಲಿ ಇಡುತ್ತಾರೆ.

ಅಧ್ಯಕ್ಷರು.—ತಾವು ಹೇಳುತ್ತಿರತಕ್ಕದ್ದು ಸರಿಯಲ್ಲ, ತಮ್ಮ ಮೇಲೆ ಆಗಿರುವ ಆರೋಪದ ಬಗ್ಗೆ ನೇರವಾಗಿ ಹೇಳಿ, ಇಲ್ಲದಿದ್ದರೆ ದಯಮಾಡಿ ಕುಳಿತುಕೊಳ್ಳಿ. ಇನ್ನೂ ಮಾತನಾಡುವವರು ಇದ್ದಾರೆ. ತಾವು ಸಾಕಷ್ಟು ಮಾತನಾಡಿದ್ದೀರಿ. ಇಡೀ ಚುನಾವಣೆಯಲ್ಲಿ ಏನೇನಾಯಿತು ಎಂದು ಹೇಳುತ್ತಾ ತಾವು ಕುಳಿತರೆ ಅದನ್ನು ಒಪ್ಪತಕ್ಕ ಮಾತಲ್ಲ. ತಮ್ಮ ವರ್ತನೆ ಸರಿಯಲ್ಲ, ತಾವು ಸ್ಪಷ್ಟೀಕರಣವನ್ನು ಕೊಡಲು ನಾನು ಅವಕಾಶ ಕೊಟ್ಟಿದ್ದೇನೆ. ಆದರೆ ಅದನ್ನು ಬಿಟ್ಟು ತಾವು ಇಡೀ ಚುನಾವಣೆಯ

ಪ್ರಕ್ರಿಯೆಯ ಬಗ್ಗೆ ಹೇಳಲು ಹೊರಟಿದ್ದೀರಲ್ಲ, ಇದು ಸರಿಯಲ್ಲ. ತಾವು ಬಜೆಟ್‌ನ ಬಗ್ಗೆ ಹೇಳಿ. ಆದನ್ನು ಬಿಟ್ಟು ಚುನಾವಣೆಯ ಇತಿಹಾಸವನ್ನೇ ಹೇಳಿಕೊಂಡು ಕುಳಿತರೆ ಆಗುವುದಿಲ್ಲ. ಇಲ್ಲಿ ಬರೇ ರಾಜಕೀಯವಾಗಿ ಭಾಷಣವನ್ನು ಮಾಡಿಕೊಂಡು ಕುಳಿತರೆ ಸರಿಯಲ್ಲ. ತಾವು ಮಾತನಾಡುತ್ತಿರುವ ತಕ್ಕದ್ದು ಸರಿಯಾಗುವುದಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ.—ಒಂದೇ ಒಂದು ನಿಮಿಷ ಕೊಡಿ, ಕೊನೆಯದಾಗಿ ಒಂದು ವಿಷಯವನ್ನು ಹೇಳಿಬಿಡುತ್ತೇನೆ. ಇವರಿಗೆ ಮೆಜಾರಿಟಿ ಇದ್ದರೆ ಎಲ್ಲಾ ಕಡೆ ಕಾಂಗ್ರೆಸ್ ಸದಸ್ಯರುಗಳನ್ನು ಏಕೆ ಹೊತ್ತುಕೊಂಡು ಹೋಗಬೇಕಾಗಿತ್ತು ? ನಮ್ಮ ಪಕ್ಷದವರು ಎಲ್ಲಿಯಾದರೂ ಒಂದು ಕಡೆ ಆ ರೀತಿ ಕೆಲಸವನ್ನು ಮಾಡಿದ್ದಾರೆಯೇ ? ಈ ರೀತಿ ಹರಿಜನ ಸದಸ್ಯರ ಉಮೇದುವಾರಿಕೆ ಫೈಲು ಮಾಡುವುದನ್ನು ತಪ್ಪಿಸಿದವರೂ ಇವರೆ, ಮತ್ತೊಂದು ಕಡೆ ಹರಿಜನರ ಬಗ್ಗೆ ಕಣ್ಣೀರನ್ನು ಹಾಕ ತಕ್ಕವರೂ ಇವರೆ. ಒಬ್ಬರು ನಿರಪರಾಧಿ ಮತ್ತು ದಕ್ಷ ತಹಶೀಲ್ದಾರರ ಬಗ್ಗೆ ಅವರು ಕಾಂಗ್ರೆಸ್ ಸದಸ್ಯರುಗಳನ್ನು ತಮ್ಮ ಜೀಪಿನಲ್ಲಿ ಕೂರಿಸಿಕೊಂಡು ಹೋದರು ಎಂದು ಹೇಳುವವರೂ ಇವರೆ, ಅನಂತರ ಸದಸ್ಯರುಗಳನ್ನು ಹೊತ್ತುಕೊಂಡು ಹೋಗುವವರೂ ಇವರೆ. ಇವರಿಗೆ ಮೆಜಾರಿಟಿ ಇಲ್ಲದಿದ್ದ ಮೇಲೆ ಆ ಮುಗ್ಧ ಹಳ್ಳಿಯ ಜನರನ್ನು ಅಶೋಕ ಹೋಟೆಲ್ ಎಂಬಲ್ಲಿ ಕೂರಿಸಿ ಅವರಿಗೆ ಮಾಡಬಾರದ ಸತ್ಕಾರ್ಯವನ್ನೆಲ್ಲಾ ಮಾಡಿದರು. ಇದು ರಾಜಕೀಯ ವ್ಯಭಿಚಾರವಲ್ಲವೆ ? ಈ ರೀತಿ ಅವರು ಮಾಡಬಹುದೆ ? ಈ ರೀತಿ ತಾವೇ ಮಾಡಿ ಇನ್ನೊಬ್ಬರ ಮೇಲೆ ಹೇಳುವುದು ಏಕೆ ? ಇದು ಅಯೋಗ್ಯತನ ತಾನೇ ? ಮತ್ತೊಂದು ವಿಚಾರವೇನೆಂದರೆ ಇವರು ಪೇಪರ್‌ನಲ್ಲಿ ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಅದು ನಿಜವಾದ ಅಂಶವಲ್ಲ, ಆದನ್ನು ನಾನು ನೋಡಿದ್ದೇನೆ. ಇವರು ರಾತ್ರಿ ಹತ್ತು ಗಂಟೆಯಿಂದ ಬೆಳಗಿನಜಾವ ೫ ಗಂಟೆಯವರೆಗೆ ಸಿ.ಎಂ. ಪರ ಇರುತ್ತಾರೆ. ಅದು ಯಾರೇ ಸಿ.ಎಂ. ಆಗಿರಬಹುದು, ಅವರ ಪರ ಇದ್ದು, ಅವರ ಕಾಲಿಡಿಯುವ ಕೆಲಸ ಮಾಡುತ್ತಾರೆ. ಇದೇ ವಿರೋಧ ಪಕ್ಷದವರ ಕೆಲಸ. ಒಂದು ರೀತಿ ಡ್ಯೂಯೆಲ್ ನಂತೆ. ಎರಡೂ ಕಡೆಯಲ್ಲಿ ವ್ಯವಹಾರವನ್ನು ಮಾಡಿಕೊಂಡು ಬಂದಿದ್ದಂಥ ಈ ವ್ಯಕ್ತಿಯಿಂದ ನಾವು ನೀತಿ, ನಿಯಮ, ನ್ಯಾಯವನ್ನು ಕಲಿಯಬೇಕಾಗಿಲ್ಲ.

ಅಧ್ಯಕ್ಷರು.—ತಾವು ಬೇಗ ಮುಗಿಸಿ. ತಾವು ಈಗಾಗಲೇ ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟಿದ್ದೀರಿ. ತಾವು ಹಿರಿಯ ಸದಸ್ಯರು. ತಮ್ಮ ಸ್ಪಷ್ಟೀಕರಣಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಪುನಃ ತಾವು ಈ ರೀತಿ ಮಾತನಾಡಿಕೊಂಡು ಕುಳಿತರೆ ಕಷ್ಟವಾಗುತ್ತದೆ, ತಾವು ಈ ರೀತಿ ಮಾತನಾಡುತ್ತಾ ಹೋದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಅನಂತಕೃಷ್ಣರವರೆ, ತಾವು ಮಾತನಾಡಲು ಪ್ರಾರಂಭ ಮಾಡಿ.

ಶ್ರೀ ಕೆ.ಹೆಚ್. ಹನುಮೇಗೌಡ.—ಇವರು ಹೇಳುವುದು ಒಂದು ಆದರೆ ಮಾಡುವುದು ಮತ್ತೊಂದು. ಈ ರೀತಿ ಮಾಡಿ ಇನ್ನೊಬ್ಬರ ಮೇಲೆ ಗೂಬೆಯನ್ನು ಕೂರಿಸತಕ್ಕ ಇವರ ಕೆಲಸ ಅತ್ಯಮ್ಲ ಅಪರಾಧ. ಜನರು ಓದಿದ್ದಾರೆ, ತಿಳಿದುಕೊಂಡಿದ್ದಾರೆ, ಜನರಿಗೆ ಅವರ ಯೋಗ್ಯತೆ ಏನು ಎನ್ನುವುದು ಗೊತ್ತಿದೆ. ಅವರು ನಿಜ ಜೀವನದಲ್ಲಿ ಡ್ಯೂಯೆಲ್ ಆಗಿ ಮಾಡಿಕೊಂಡಿದ್ದಾರೆ. ಒಂದು ಕಡೆ ಕಣ್ಣೀರನ್ನು ಸುರಿಸತಕ್ಕವರೂ ಇವರೇ ಮತ್ತೊಂದು ಕಡೆ ಅದಕ್ಕೆ ಬೆಂಕಿಯನ್ನು ಹಚ್ಚತಕ್ಕ ವ್ಯವಹಾರವನ್ನು ಮಾಡಿಕೊಂಡು ಬರುವವರೂ ಸಹ ಇವರೇ ಆಗಿದ್ದಾರೆ. ಇಂಥ ಅವರ ನೀತಿ ಖಂಡನೀಯ, ಗುಂಡೂರಾವ್‌ರವರು, ದೇವರಾಜ್ ಅರಸುರವರನ್ನು ಕರೆದುಕೊಂಡು ಹೋಗಿ ರಾತೋರಾತ್ರಿ, ರಾತ್ರಿ ೧೧–೩೦ ರಿಂದ ಬೆಳಗಿನ ಜಾವ ೫ ಗಂಟೆಯವರೆಗೆ ಅವರುಗಳ ಕಾಲನ್ನು ಹಿಡಿಯತಕ್ಕ ವ್ಯವಹಾರವನ್ನು ಇವರು ಮಾಡಿಕೊಂಡು ಬಂದಿದ್ದಾರೆ. ಇವರು ನಿಜವಾಗಲು ವಿರೋಧ ಪಕ್ಷದ ನಾಯಕರಾಗಿದ್ದು, ಆ ಯೋಗ್ಯತೆಯನ್ನು ಉಳಿಸಿಕೊಳ್ಳಬೇಕಾಗಿದ್ದರೆ ರಾತ್ರೋರಾತ್ರಿ ನಮ್ಮ ಮುಖ್ಯಮಂತ್ರಿಯವರ ಕಾಲನ್ನು ಹಿಡಿಯತಕ್ಕ ಕೆಲಸವನ್ನು ಬಿಟ್ಟು ಧೈರ್ಯವಾಗಿ ಹೋರಾಟ ಮಾಡಿ, ಎನ್ನತಕ್ಕ ಮಾತನ್ನು ಈ ಸದನದ ಮೂಲಕ ಹೇಳಿ, ಅವರು ಇನ್ನೊಂದು ಸಾರಿ ಬಾಯಿಬಿಟ್ಟರೆ, ಅವರ ಎಲ್ಲಾ ಅವ್ಯವಹಾರವನ್ನು, ಅವರ ಎಲ್ಲಾ ಇತಿಹಾಸವನ್ನು ಬಿಚ್ಚಿಡುತ್ತೇನೆ ಎನ್ನತಕ್ಕ ಮಾತನ್ನು ಹೇಳಿ ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಮಂಡಿಸಿರುವ ಮಾತುಗಳನ್ನು ಮುಗಿಸುತ್ತೇನೆ.